ಶ್ರೀ ಹೆಚ್. ಡಿ. ದೇವೇಗೌಡ.—ಒಂದು ವಿಷಯ ಹೇಳುವುದಾದರೆ, ಕಳೆದ ಒಂದು ವರ್ಷದಲ್ಲಿ ಕ್ವಾಲಿಟಿ ವರ್ಕ್‌ನ್ನು ಇಂಪ್ರೂವ್ ಮಾಡಬೇಕೆಂದು ನನಗೆ ತಿಳಿದಂಥ ಅಸ್ತ್ರಗಳನ್ನೆಲ್ಲಾ ಉಪಯೋಗ ಮಾಡಿದ್ದೇನೆ. ಈಗ ನಮ್ಮ ಇಲಾಖೆಯಲ್ಲಿ ನನಗೆ ತಿಳಿದಮಟ್ಟಿಗೆ ಕ್ವಾಲಿಟಿ ಮತ್ತು ಸ್ಟಾಂಡರ್ಡ್ ಹೆಚ್ಚಿದೆ.

ವಿಷಯ : ಅರಣ್ಯ ಕೈಗಾರಿಕಾ ನಿಗಮದಲ್ಲಿನ ದಿನಗೂಲಿ ನೌಕರರನ್ನು ಖಾಯಂ ಮಾಡುವ ವಿಚಾರ.

ಪ್ರಶ್ನೆ ಸಂಖ್ಯೆ 675 (1539) ಶ್ರೀ ಎನ್ ಜಿ. ನಾಯಕ್ (ಮೊಳಕಾಲ್ಮೂರು) ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

(ಅ) ಬೆಂಗಳೂರಿನ ಅರಣ್ಯ ಕೈಗಾರಿಕಾ ನಿಗಮದಲ್ಲಿನ ದಿನಗೂಲಿ ನೌಕರರು ಅವರ ಹುದ್ದೆಗಳನ್ನು ಖಾಯಂಮಾಡಬೇಕೆಂದು ಒತ್ತಾಯಿಸುತ್ತಿರುವುದು ಸರಕಾರದವರಿಗೆ ಗೊತ್ತಿದೆಯೆ;

(ಆ) ಹಾಗಿದ್ದಲ್ಲಿ ಎಷ್ಟುಮಂದಿ ದಿನಗೂಲಿ ನೌಕರರಿದ್ದಾರೆ, ಅವರುಗಳ ಹೆಸರುಗಳೇನು ಮತ್ತು ಎಷ್ಟು ಸಮಯದಿಂದ ಕೆಲಸ ಮಾಡುತ್ತಿದ್ದಾರೆ;

(ಇ) ಲೋಕೋಪಯೋಗಿ ಇಲಾಖೆಯಲ್ಲಿನ ದಿನಗೂಲಿ ನೌಕರರನ್ನು ಖಾಯಂ ಮಾಡಿದ ರೀತ್ಯಾ ಇವರನ್ನು ಖಾಯಂಮಾಡುವ ಬಗ್ಗೆ ಸರಕಾರದವರಲ್ಲಿ ಏನಾದರೂ ಸಲಹೆ ಇದೆಯೆ;

(ಈ) ಹಾಗಿದ್ದಲ್ಲಿ ಅವರನ್ನು ಎಂದಿನಿಂದ ಖಾಯಂ ಮಾಡಲಾಗುವುದು?

ಶ್ರೀ ಬಿ. ಎ. ಜೀವಿಜಯ (ಅರಣ್ಯ ರಾಜ್ಯ ಮಂತ್ರಿಗಳು).—

(ಅ) ಹೌದು.

(ಆ) 198 ಮಂದಿ ಕೆಲಸಗಾರರಿದ್ದಾರೆ. ದಿನಗೂಲಿ ಅವರ ಹೆಸರುಗಳು ಮತ್ತು ಸೇವಾ ಅವಧಿ ವಿವರಗಳು ಲಗತ್ತಿಸಿರುವ ಪಟ್ಟಿಯಲ್ಲಿವೆ.

(ಇ) ಇಲ್ಲಾ.

(ಈ) ಮೇಲಿನ (ಇ)ಗೆ ಕೊಟ್ಟ ಉತ್ತರದಿಂದ ಇದಕ್ಕೆ ಉತ್ತರ ಉದ್ಭವಿಸುವುದಿಲ್ಲ.

ಶ್ರೀಯುತ ಎನ್. ಜಿ. ನಾಯಕರ ಪ್ರಶ್ನೆ ಸಂಖ್ಯೆ 1539 (ಅ) ಉಪ ಪಶ್ನೆಯ ಉತ್ತರದ ಭಾಗ :

ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕೋದ್ಯಮ ನಿಯಮಿತದಲ್ಲಿ ದಿನಗೂಲಿಯ ಮೇಲೆ ಕೆಲಸಮಾಡುತ್ತಿರುವವರ ಪಟ್ಟಿ.

ಕ್ರಮ ಸಂಖ್ಯೆ	ಹೆಸರು		ಕೆಲಸಕ್ಕೆ ಸೇರಿದ ದಿನಾಂಕ
1	2		3
1.	ಮಹಮದ್ ಷರೀಫ್	....	11-1-1974
2.	ಡಿ. ಬಿ. ಮಡಿವಾಳ್	....	18-1-1974
3.	ಕೆ. ಎಸ್. ಪೂಣಚ	....	6-5-1974
4.	ಆರ್. ಬಿ. ನಾಯಕ್	....	6-6-1974
5.	ಹೆಚ್. ಎಸ್. ಮೋಹನ	....	1-7-1974
6.	ಮೃಂತ್ಯುಂಜಯ	....	1-7-1974
7.	ಸೋಮಪೂಜಾರಿ	....	1-7-1974
8.	ಬಿ. ಮರಿ	....	8-7-1974
9.	ಎಂ. ಹೆಚ್. ನಾಯಕ್	....	8-7-1974
10.	ಬಿ. ಸತ್ಯನಾರಾಯಣ	....	1-8-1974
11.	ಎಂ. ಪಿ. ರಮೇಶ್	....	8-11-1974
12.	ವಿ. ಬಿ. ನಾಯಕ್	....	9-11-1974
13.	ಜೆ. ಎಮ್ ಡಿಸೋಜ	....	5-5-1974
14.	ಎ. ಕೆ. ನಾಯಕ್	....	9-11-1974
15.	ಡಿ. ಟಿ. ಗೊನ್ಸಾಲ್ವಿಸ್	....	9-11-1974

1	2		3
16.	ಎಂ. ಕೆ. ಹೊಸೂರ್	....	20-11-1974
17.	ವಿ. ಆರ್. ರೋಕಡೆ	....	20-11-1974
18.	ಐ. ಜೆ. ನಾಯಕ್	....	30-12-1974
19.	ಕೆ. ಬಿ. ಗೊಂಡ	....	30-12-1974
20.	ಬಿ. ಐ. ನಾಯಕ್	....	1974
21.	ಟಿ. ಎಂ. ರಾಜಿಗೌಡ	....	1-8-1975
22.	ಬಿ. ಕೆ. ಶ್ರೀನಿವಾಸ	....	1-4-1975
23.	ಬಿ. ಶಿವಣ್ಣ	....	1-4-1975
24.	ಶಿವನಂಜೆಗೌಡ	....	1-4-1975
25.	ಕೆ. ಹೆಚ್. ನಿಂಗೇಷ್	....	1-4-1975
26.	ತಿಮ್ಮಪ್ಪ	....	1-4-1975
27.	ಕೆ. ರಾಜಣ್ಣ	....	1-4-1975
28.	ಕಾಜ ಮೊಯಿದ್ದೀನ್	....	1-4-1975
29.	ಕೆ. ವಿ. ಸತ್ಯನಾರಾಯಣ	....	13-4-1976
30.	ಜೆ. ಎಸ್. ಶಿವಲಿಂಗಪ್ಪ	....	1-5-1976
31.	ಎನ್. ಓಂಕಾರಯ್ಯ	....	21-5-1976
32.	ಷೇಕ್ ಅಭ್ಬಾಸ್	....	19-10-1976
33.	ತಿಮ್ಮಯ್ಯ	....	5-9-1977
34.	ಕೆ. ಎನ್. ನಾಯಕ್	....	30-10-1977
35.	ಕೆ. ವಿ. ಜಯರಾಂ	....	2-11-1977
36.	ಎಲ್. ಜಿ. ದಯಾನಂದ	....	4-11-1977
37.	ಕೆ. ಎಸ್. ಮದಿನೂರ್	....	14-12-1977
38.	ವಿ. ಸುದರ್ಶನ್	....	1-12-1977
39.	ಕೆ. ಎನ್. ಶಾಸ್ತ್ರಿ	....	12-12-1977
40.	ಕೆ. ಎಸ್. ಚಂದ್ರಶೇಖರ	....	1-1-1978
41.	ಬಂಡಯ್ಯ	....	1-1-1978
42.	ಎನ್. ಆರ್. ಹೆಗಡೆ	....	1-1-1978
43.	ಎನ್. ಕೆ. ಬಾಲಚಂದರ್	....	1-1-1978
44.	ಮಾದಯ್ಯ	....	1-1-1978
45.	ಜಿ. ಕೃಷ್ಣ	....	2-1-1978
46.	ಎಂ. ಆರ್, ಸಾವ್‌ಕಾರ್	....	8-1-1978
47.	ಜಿ. ಎನ್. ಮಲ್ಲೇಶ	....	2-1-1978
48.	ವಿ. ಬಿ. ಸೌಂಶಿ	....	14-1-1978
49.	ಎನ್. ಪಿ. ಜೋಷಿ	....	16-1-1978
50.	ಎಸ್. ಡಿ. ನಾಯಕ್	....	1978
51.	ಎಸ್. ಎಂ. ಬಾಲರೆಡ್ಡಿ	....	27-1-1978
52.	ಅಬ್ದುಲ್ ಖಾದರ್	....	1-2-1978
53.	ಸಿ. ಬಿ. ನೇರ್ಲೆಕರ್	....	4-2-1978
54.	ಎಂ. ಕೆ. ಹುಬ್ಬಿ	....	6-2-1978
55.	ಆರ್. ಎನ್. ಸರೋಜ	....	14-2-1978
56.	ಬಿ. ಬಿ. ಬೆಟ್‌ಸೂರ್	....	26-2-1978
57.	ಬಿ. ಜಿ. ಹಿರೆಹಾಳ್	....	27-2-1978
58.	ಕೆ. ಬಿ, ನಾಗೇಶ್ವರಿ	....	15-3-1978
59.	ಎಸ್. ಹೆಚ್, ಸಬಾಲಡ್	....	29-3-1978

1	2		3
60.	ಆರ್. ವಿ. ಕೆ. ಆರಾಧ್ಯ	....	1-3-1978
61.	ಎಮ್ ಜಿ. ನಾಗೆಕರ್	....	1-4-1978
62.	ಟಿ. ಎಂ. ಪಾಟೀಲ್	....	13-4-1978
63.	ಪಿ, ಪಿ. ಹಿರಣ್ಣಯ್ಯ	....	17-4-1978
64.	ವಿ. ಕೆ. ನಾಯಕ್	....	18-4-1978
65.	ಬಿ. ಆರ್. ಅನಂತರಾಜು	....	24-4-1978
66.	ಪಿ. ಸಿ. ಲೋಕಪ್ಪಗೌಡ	....	1-5-1978
67.	ವಿ. ಎಸ್. ಭಂಡಾರಿ	....	7-5-1978
68.	ಜಿ. ಟಿ. ಶಿವಕುಮಾರ್	....	8-5-1978
69.	ಹೊನ್ನೆಗೌಡ	....	10-5-1978
70,	ಗುಳ್ಳೆಗೌಡ	...	17-5-1978
71.	ಎಂ. ಬಿ. ನಾಗೆಕರ್	....	16-5-1978
72.	ರಂಗಶೆಟ್ಟಿ	....	20-5-1978
73.	ಎಂ. ಸಿ. ನೆಲಖಿಗಿ	....	25-5-1978
74.	ಎನ್. ಆರ್. ಕುಲಕರ್ಣಿ	....	28-5-1978
75.	ಕೆ. ಐ. ಗುಂಜಕರ್	....	1-6-1978
76.	ಕ್ಯಾತಣ್ಣವರ್	....	1-6-1978
77.	ಎಸ್. ವಿ. ವೀರಾಮರ್	....	14-6-1978
78.	ಜಿ. ಬಿ. ದೊಡ್ಡಮನಿ	....	18-6-1978
79.	ಸಿ. ಆರ್. ಮಂಜುನಾಥ	....	28-6-1978
80.	ಪಾಂಡುರಂಗ ವಿಟ್ಟಳ್	....	1-7-1978
81.	ಎಚ್. ಡಿ. ನಾಗಣ್ಣ	....	5-7-1978
82.	ದೊಡ್ಡಗೌಡ	....	8-7-1978
83.	ಟಿ. ಎಸ್. ಬಸಪ್ಪ	....	10-7 1978
84.	ಪಾಲ್ಪಂಡಿ	....	11-7-1978
85.	ನರಸಿಂಹಮೂರ್ತಿ	....	17-7-1978
86.	ಡಿ. ಸಿ. ಕುಲಕರ್ಣಿ	....	20-7-1978
87.	ರಾಮಚಂದ್ರ	....	24-7-1978
88.	ಬಿ. ಸೋಮಶೇಖರ	....	24-7-1978
89.	ಅರಬಿ ಮಲ್ಲೂರಮಠ	....	27-7-1978
90.	ಬಿ. ಆರ್. ಆಂಜನಪ್ಪ	....	6-8-1978
91.	ಬಿ. ಶ್ರೀಕಂಠಸ್ವಾಮಿ	....	4-8-1978
92.	ಬಿ. ಆರ್. ಸವಣೂರ್	....	9-8-1978
93.	ಆರ್. ಬಿ. ಕವಾಡಿಕಾಯ್	....	16-8-1978
94.	ವಿಜಯ ಆರ್. ಜಗಜಾಲೆ	....	17-8-1978
95.	ಜಿ. ಪಿ. ಯಲಿಗಾರ್	....	19-8-1978
96.	ಎಂ. ವಿ. ಬೊಮ್ಮನ ಗೌಡರ್	....	25-8-1978
97.	ವೈ. ಎಸ್. ದೇಶಬಂಡಾರಿ	....	1-9-1974
98.	ಎಚ್. ಬಿ, ಶಿಗ್ಗಾವಿ	....	3-9-1978
99.	ಎಸ್. ಶಬ್ಬೀರ್ ಸಾಬ್	....	10-9-1978
100.	ಎಸ್. ಜಿ. ಕಾಮತ್	....	10-9-1978
101.	ಎಂ. ಎಂ. ಬ್ಯಾಡಗಿ	....	13-9-1978
102.	ಎಚ್. ಕೆ. ಮುಟಿಮನಿ	....	15-9-1978

1.	2		3
103.	ಬಿ. ಎ. ಕೃಷ್ಣಮೂರ್ತಿ	....	27-9-1978
104.	ಎ. ಎ. ಡಿ. ಜಯರಾಮಯ್ಯ	....	12-10-1978
105.	ಎ. ಕೆ. ತಿಪ್ಪಯ್ಯ	....	17-10-1978
106.	ಆರ್, ಪುಟ್ಟಿಗೌಡ	....	19-10-1978
107.	ಎಚ್. ಪಿ. ಸುರೇಶ್		2-11-1978
108.	ಎಲ್. ಜಿ. ಕ್ಯಾಸ್ಪಲಿನೊ	....	26-11-1978
109.	ಜೈಶೀಲಾ	....	1-12-1978
110.	ಶಿವಶಂಕರ್	....	11-12-1978
111.	ಕೆ. ಎನ್. ರುದ್ರಪ್ಪ	....	28-7-1978
112.	ವಿ. ಎಲ್. ಸೋಮಶೇಖರ್	....	14-2-1978
113.	ಎಚ್. ಬಸವೆಗೌಡ	....	22-12-1978
114.	ಎಚ್. ವಿ. ರಾಜಣ್ಣ	...	7-1-1979
115.	ಬಿ. ಕೆ. ಮಂಗಳೂರು	....	11-1-1979
116.	ಪಿ. ಸೇತುಮಾದವನ್	....	11-1-1979
117.	ಸೈಯದ್ ಹಫೀಜ್	....	12-1-1979
118.	ಆರ್. ಆರ್. ಹಟ್ಟಿ	...	13-1-1979
119.	ಎನ್. ಬಿ. ರೆಡ್ಡಿ	....	15-1-1979
120.	ವಿ, ಎ. ಪತ್ರೋಟ್	....	15-1-1979
121.	ಸಿದ್ದರಾಜು ಮಲೆಬೆನ್ನೂರು	....	22-1-1979
122.	ಜಿ. ಚಿಕ್ಕಬೋರಯ್ಯ	....	27-1-1979
123.	ಜಿ. ಕೆ. ಚಂದ್ರಶೇಖರ್	....	28-1-1979
124.	ಕೆ. ರಾಮಚಂದ್ರು	....	28-1-1979
125.	ರಾಮಕೃಷ್ಣ	....	28-1-1979
126.	ಎನ್. ಗೋವಿಂದಪ್ಪ	....	1-2-1979
127.	ಎಮ್. ನಾಗರಾಜ್	....	5-2-1979
128.	ಎಚ್, ನಾರಾಯಣಪ್ಪ	....	6-2-1979
129.	ಪಿ. ಎಮ್. ನಿಂಬನಾಯಕರ್	....	10-2-1979
130.	ಬಿ. ಕೆ. ಬೋರಯ್ಯ	....	10-2-1979
131.	ಎಸ್. ಎಸ್. ಅಂಗಡಿ	....	11-2-1979
132.	ವಿಸ್. ಶಂಕರಪ್ಪ	....	12-2-1979
133.	ಎ. ಎಮ್. ರಾಜಶೇಖರ	....	26-2-1979
134.	ಎಚ್. ಪಿ. ಶೇಷಚಲಪ್ಪ	....	1-3-1979
135.	ಕೆ. ಎನ್. ಚಲುವೆಗೌಡ	....	5-3-1979
136.	ಟಿ. ಎಸ್. ನಥವಿಲ್‌ಮಣಿ ಟಿ. ಎಸ್. ಸನ್ನದ್	....	6-3-1979
137.	ಎಲ್. ಎಸ್. ನಡವಿಲ್‌ಮಣಿ	....	11-3-1979
138.	ಎಸ್. ಐ. ಭದ್ರಾಪುರ್	....	14-3-1979
139.	ಎಂ. ಜಿ. ಚಂದ್ರಶೇಖರಪ್ಪ	....	17-3-1979
140.	ಕೆ. ನಾಗಣ್ಣಗೌಡ	....	22-3-1978
141.	ಬಿ. ಎಲ್. ಚಿಕ್ಕಣ್ಣವರ್	....	5-4-1979
142.	ಡಿ. ಜಿ. ಚಪ್ಪೆಕರ್	....	10-4-1979
143.	ಕೆ. ದಯಾನಂದ	....	10.4-1979
144.	ಕೆ. ಎಚ್. ಚಂದ್ರಪ್ಪ	...	23-4-1979
145.	ಎಸ್. ಬಿ. ಪಾಟೀಲ್	...	25-4-1979
146.	ಬಿ. ವಿ. ಅಣ್ಣಗೌಡರ್	....	25-4-1979

1	2		3
147.	ಕೆ. ಆರ್. ಮಜ್ಜಿಗೌಡ	...	25-4-1979
148.	ಆರ್. ಎಸ್. ಹೀರೇಮಠ	....	26-4-1979
149.	ಸಣ್ಣಹುಚ್ಚಪ್ಪ	....	1-5-1979
150.	ಎಸ್. ಬಿ. ಬಣಗಾರ	....	4-5-1979
151.	ಅಪ್ಪಾಜಿಗೌಡ	....	5-5-1979
152.	ಕೃಷ್ಣಭಟ	....	14-5-1979
153.	ಹೆಚ್. ವೀರಭದ್ರಪ್ಪ	....	22-5-1979
154.	ಎಂ. ಆರ್. ರಘುರಾಮ್	....	31-5-1979
155.	ಕೆ. ಸುಬ್ಬಯ್ಯ	....	5-6-1979
156.	ಆರ್. ಎಸ್. ತಾಲಿಕರ್	....	6-6-1979
157.	ಬಿ. ಎಂ ಸದಾನಂದಸ್ವಾಮಿ	....	23-6-1979
158.	ಜಿ. ಮೂರ್ತಿ	....	28-6-1979
159.	ಎಫ್. ಬಿ. ಪಾಟೀಲ್	....	2-7-1979
160.	ನಾಗರಾಜ	....	16-7-1979
161.	ಪಿ. ಸಿದ್ದರಾಮಪ್ಪ	....	21-7-1979
162.	ಜಿ. ಸಿ. ಚಂದ್ರಶೇಖರಪ್ಪ	....	28-7-1979
163.	ಜಿ. ಎಸ್. ವೆಂಕಟೇಶ್	....	9-8-1979
164.	ಸಿದ್ದೆಗೌಡ	....	8-1979
165.	ಹೆಚ್. ಸಿ. ಚಿಂಚಳಿ	....	17-10-1979
166.	ಬಾಬು	....	1-1-1980
167.	ಹೆಚ್. ಎಸ್. ಸ್ವಾಮಿ	....	4-1-1980
168.	ಕೆ. ಬಿ. ಗೌಡ	....	8-1.1980
169.	ಹೀರಣ್ಣಪ್ಪ	....	10-1-1980
170.	ಎಂ. ಆರ್. ಹುಲ್ಲಿಕೇರಿ	....	5-2-1980
171.	ಕುಮಾರಸ್ವಾಮಿ	....	21-4-1980
172.	ಹೆಚ್. ಆರ್. ಕುಮ್ಟಕರ್	....	10-5-1980
173.	ಎಂ. ಎ. ಖಾನ್	....	2-5-1980
174.	ಬಾಬು ಪುತ್ತುರು	....	28-7-1980
175.	ಉಸ್ಮಾನ್	....	28-7-1980
176.	ಮುದ್ದ	....	28-7-1980
177.	ಅಬ್ದುಲ್ ಕರಿಂ	....	28-7-1980
178.	ಎಸ್. ಬಾಲರಾಜು	....	5-11-1980
179.	ಬಿ. ಎ. ಆಂಜನೇಯ	....	16-1-1981
180.	ಜಿ. ಐ. ನಾಯಕ್	....	1-4-1981
181.	ಸಂಕಪ್ಪ ದಮಾಯತ್	....	1-4-1981
182.	ಬಸವರಾಜೇಗೌಡ	....	2-4-1981
183.	ಜೆ. ಕೆ. ನಾಯಕ್	....	2-4-1981
184.	ಆರ್. ಜಿ. ಮಡಿವಾಳ	....	2-4.1981
185.	ಟಿ. ಡಿ. ನಾಯಕ್	....	2-4-1981
186.	ಪಿ. ವಿ. ನಾಯಕ್	....	4-6-1981
187.	ಎಂ. ಹೆಚ್. ಅಂಬಿಗಾ	....	4-6-1981
188.	ಎಸ್. ಆರ್. ಯಮುನಾಬಾಯಿ	....	1-7-1981
189.	ಪಿ. ಜಿ. ನಾಯಕ್	....	10-9-1981
190.	ಗುತ್ತೆಪ್ಪ	....	1-12-1981

1	2	3
191.	ಶ್ರೀನಿವಾಸ ಶೆಟ್ಟಿ	8-1-1982
192.	ಬಾಲರಾಜು	 10-5-1982
193.	ಹೆಚ್. ಬಿ. ಸದಾನಂದ	 6-10-1982
194.	ಆನಂದ	 1-2-1983
195.	ಮಹಮ್ಮದ್	 21-6-1983
196.	ವೈ. ಗುಣಶೇಖರ್	 5-9-1993
197.	ಜಿ. ಆರ್. ಬ್ಯಾಡಗಿ	 12-10-1978
198.	ರಾಮಪ್ಪ	 1979

ಆಧೀನ ಕಾರ್ಯದರ್ಶಿ
ಆಹಾರ ಮತ್ತು ಆರಣ್ಯ ಇಲಾಖೆ
ಬೆಂಗಳೂರು.

ಶ್ರೀ ಎನ್. ಜಿ. ನಾಯಕ್.—ಈ 198 ಮಂದಿ 1974ರಿಂದ ಇಲ್ಲಿಯವರೆಗೆ ಕೆಲಸಮಾಡಿಕೊಂಡು ಬಂದಿದ್ದರೂ ಸಹ ಇವರನ್ನು ಇನ್ನೂ ಖಾಯಂ ಮಾಡಿಲ್ಲ. ಸಾಮಾಜಿಕ ಆರಣ್ಯವನ್ನು ಬೆಳೆಸುವ ಯೋಜನೆಯ ಅಡಿಯಲ್ಲಿಯಾದರೂ ಇವರನ್ನು ಏತಕ್ಕೆ ಖಾಯಂ ಮಾಡಬಾರದು ? ಮಾನ್ಯ ಮಂತ್ರಿಗಳು ಮನಸ್ಸು ಮಾಡಿದರೆ ಈ ಕೆಲಸ ಆಗುತ್ತದೆ. ಆದಷ್ಟೂ ಜಾಗ್ರತೆ ಇವರನ್ನು ಖಾಯಂ ಮಾಡಿದರೆ ತಮಗೂ ಒಳ್ಳೆಯ ಹೆಸರು ಬರುತ್ತದೆ ಮತ್ತು ಸರ್ಕಾರಕ್ಕೂ ಒಳ್ಳೆಯ ಹೆಸರು ಬರುತ್ತದೆ. ಆದ್ದರಿಂದ ಈ ಬಡವರ ಬಗ್ಗೆ ಅನುಕಂಪ ತೋರಿಸುತ್ತೀರಾ ?

ಶ್ರೀ ಬಿ. ಎ. ಜೀವಿಜಯ.—1974ರಿಂದಲೂ ಇವರನ್ನು ಹಂಗಾಮಿಯಾಗಿ ಕೆಲಸಕ್ಕೆ ತೆಗೆದುಕೊಳ್ಳಲಾಗುತ್ತಿದೆ. ಸಾಮಾಜಿಕ ಆರಣ್ಯ ಬೆಳೆಸುವ ಯೋಜನೆ ಅಡಿಯಲ್ಲಿ ಇವರಿಗೆ ವಯೋಮಿತಿ ಇದ್ದರೆ, ಇಂಟರ್‌ವ್ಯೂನಲ್ಲಿ ಪಾಸಾಗಿದ್ದರೆ ಖಾಯಂ ಆಗಿ ಕೆಲಸಕ್ಕೆ ತೆಗೆದುಕೊಳ್ಳಲು ಯಾವ ತೊಂದರೆಯೂ ಬರುವುದಿಲ್ಲ. ಇದು ಮಾನವೀಯತೆಯ ಪ್ರಶ್ನೆಯಾಗಿದೆ. ಈಗ ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ ಆಕ್ಟ್ ಪ್ರಕಾರ ಇವರನ್ನು ಯಾವರೀತಿ ತೆಗೆದುಕೊಳ್ಳಬೇಕೆಂಬ ಬಗ್ಗೆ ಇಂಡಸ್ಟ್ರಿಯಲ್ ಟ್ರಿಬ್ಯುನಲ್ ಮುಂದೆ ಕೇಸ್ ಇದೆ. ಅಲ್ಲಿ ಯಾವರೀತಿ ತೀರ್ಮಾನ ಸಿಗುತ್ತದೆಂಬುದನ್ನು ನೋಡಿದನಂತರ ನಾವು ಇವರನ್ನು ಖಾಯಂಮಾಡುವ ಬಗ್ಗೆ ಪರಿಶೀಲನೆ ಮಾಡುತ್ತೇವೆ. ಇದರ ಜೊತೆಗೆ ಆರಣ್ಯ ಕೈಗಾರಿಕಾ ನಿಗಮದಲ್ಲಿ ಅವಕಾಶ ಸಿಕ್ಕಿದಂತೆಲ್ಲಾ ಇವರನ್ನು ಅಬ್‌ಸಾರ್ಬ್ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎನ್. ಜಿ. ನಾಯಕ್.—ಇದುವರೆಗೆ ನನಗೆ ತಿಳಿದಮಟ್ಟಿಗೆ ಕೆಲವರನ್ನು ಈ ಆರಣ್ಯ ಕೈಗಾರಿಕಾ ನಿಗಮದಲ್ಲಿ ಇಂಟರ್‌ವ್ಯೂ ಮಾಡಿದನಂತರ ಕೆಲಸ ಖಾಯಂ ಮಾಡಿದ್ದಾರೆ. ಅದೇರೀತಿಯಲ್ಲಿ ಬೇರೆಯವರನ್ನು ಸಹ ಏತಕ್ಕೆ ಖಾಯಂ ಮಾಡಬಾರದು ? ಮಾನ್ಯ ಮಂತ್ರಿಗಳು ಸ್ವಲ್ಪ ಮನಸ್ಸು ಮಾಡಿದರೆ ಈ ಜನರಿಗೆ ಒಳ್ಳೆಯದಾಗುತ್ತದೆಂದು ನನಗನಿಸುತ್ತದೆ.

ಅಧ್ಯಕ್ಷರು.—ಇಂಡಸ್ಟ್ರಿಯಲ್ ಟ್ರಿಬ್ಯುನಲ್ ಮುಂದೆ ಇದರ ಕೇಸ್ ಇದೆ ಎಂದು ಹೇಳಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಕೈಗಾರಿಕಾ ನ್ಯಾಯಾಲಯದ ಮುಂದೆ ಈ ಕೇಸ್ ಇದೆ ಎಂದು ಹೇಳಿದರು. ಅಲ್ಲಿನ ತೀರ್ಮಾನದ ಪ್ರಕಾರ ತಾವು ಮುಂದಿನ ಕ್ರಮ ತೆಗೆದುಕೊಳ್ಳುವುದಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ. ಆದರೆ ಯಾರು ಯಾರು 240 ದಿನಗಳ ಕಾಲ ಕೆಲಸ ಮಾಡಿರುತ್ತಾರೋ ಅಂತಹವರನ್ನೆಲ್ಲಾ ಖಾಯಂ ಮಾಡಬಹುದೆಂದು ಹೈಕೋರ್ಟಿನ ಮತ್ತು ಸುಪ್ರೀಂ ಕೋರ್ಟಿನ ತೀರ್ಮಾನ ಇರಬೇಕಾದರೆ, ಆ ಒಂದು ತೀರ್ಮಾನವನ್ನು ತಾವು ಇಲ್ಲಿ ಉಲ್ಲಂಘನೆ ಮಾಡಿದಂತೆ ಆಗುವುದಿಲ್ಲವೇ ? ಆದ್ದರಿಂದ ಇದನ್ನು ಪರಿಶೀಲನೆಮಾಡಿ ಇವರೆಲ್ಲರನ್ನೂ ಖಾಯಂ ಮಾಡುತ್ತೀರಾ ?

ಶ್ರೀ ಬಿ. ಎ. ಜೀವಿಜಯ.—90 ದಿವಸಗಳ ಕಾಲ ಇವರನ್ನು ಕೆಲಸಕ್ಕೆ ತೆಗೆದುಕೊಂಡು ನಂತ ಕೆಲಸದಿಂದ ತೆಗೆದು ಪುನಃ ನೇಮಕ ಮಾಡಿಕೊಳ್ಳುವಂತಹ ಒಂದು ಪದ್ಧತಿಯನ್ನು ಇಲ್ಲಿ ಅನುಸರಿ

ಕೊಂಡು ಬಂದಿದ್ದಾರೆ. 240 ದಿವಸಗಳ ಕಾಲ ಕೆಲಸಮಾಡಿದ್ದರೆ ಖಾಯಂ ಮಾಡಬಹುದೆಂಬ ಬಗ್ಗೆ ಹೈಕೋರ್ಟಿನ ತೀರ್ಮಾನ ಇರುವುದು ನನಗೆ ಗೊತ್ತಿದೆ. ಆದರೆ ಇವರುಗಳು ಸತತವಾಗಿ 240 ದಿವಸಗಳ ವರೆಗೆ ಕೆಲಸಮಾಡಿಲ್ಲ. ಮಾನವೀಯತೆ ದೃಷ್ಟಿ ಇಟ್ಟುಕೊಂಡು ಇವರುಗಳನ್ನು ಕೆಲಸದಲ್ಲಿ ಮುಂದುವರೆಸ ಲಾಗಿದೆ. ಈ ಹಿಂದೆ ಯಾವುದೋ ಕೆಲಸಕ್ಕೆಂದು ಇವರನ್ನು ನೇಮಕಮಾಡಿಕೊಳ್ಳಲಾಯಿತು. ನಂತರ 90 ದಿವಸಗಳ ನಂತರ ಕೆಲಸದಿಂದ ತೆಗೆದು ಮತ್ತೆ ಕೆಲಸ ಒದಗಿಸಲಾಗುತ್ತಿದೆ. ಯಾವುದೇ ಕಾರಣ ದಿಂದಲೂ ಇವರನ್ನು ಕೆಲಸದಿಂದ ತೆಗೆಯಬಾರದೆಂದು ಅರಣ್ಯ ಕೈಗಾರಿಕಾ ನಿಗಮದವರಿಗೆ ಆದೇಶ ನೀಡ ಲಾಗಿದೆ. ಅಷ್ಟೇ ಅಲ್ಲ, ನಮಗೆ ಸಾಕಷ್ಟು ಕಟ್ಟಿಗೆಸಿಗದಿದ್ದರೂ ಸಹ 54 ಡಿಪೋಗಳ ಮೂಲಕ ಜನರಿಗೆ ಏನು ಕಟ್ಟಿಗೆ ಸರಬರಾಜು ಮಾಡಲಾಗುತ್ತಿದೆ, ಅವುಗಳನ್ನು ಮುಚ್ಚದೆ ಇವರಿಗೆ ಕೆಲಸ ಒದಗಿಸುವ ದೃಷ್ಟಿ ಯಿಂದ ಮುಂದುವರಿಸಿಕೊಂಡು ಹೋಗುತ್ತೇವೆ, ಅವಕಾಶ ಸಿಕ್ಕಿದಂತೆಲ್ಲಾ ಇವರನ್ನು ಖಾಯಂ ಮಾಡ ಲಾಗುತ್ತದೆ. ಇದರ ಜೊತೆಗೆ ಸಾಮಾಜಿಕ ಅರಣ್ಯ ಯೋಜನೆಯ ಅಡಿಯಲ್ಲಿ ಕೆಲಸ ಮಾಡಲು ಜನರನ್ನು ಕೆಲಸಕ್ಕೆ ತೆಗೆದುಕೊಳ್ಳುವಾಗ ಇವರೂ ಸಹ ಅಲ್ಲಿನ ರೆಕ್ರೂಟ್‌ಮೆಂಟ್ ಕಮಿಟಿ ಮುಂದೆ ಇಂಟರ್‌ವ್ಯೂಗೆ ಹೋಗಿ ಆಯ್ಕೆಗೊಳ್ಳಲು ಅವಕಾಶವಿದೆ.

ವಿಷಯ : ಉತ್ತರ ಕನ್ನಡ ಜಿಲ್ಲೆಯಲ್ಲಿ ಅರಣ್ಯ ಜಮೀನಿನ ಒತ್ತುವರಿ.

ಪ್ರಶ್ನೆ ಸಂಖ್ಯೆ. 676 (1698) ಶ್ರೀ ಆರ್. ವಿ. ದೇಶಪಾಂಡೆ (ಹಳಿಯಾಳ) ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

(ಅ) 1-4-1978ಕ್ಕಿಂತ ಹಿಂದೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಅತಿಕ್ರಮಣ ಮಾಡಿದ ಅರಣ್ಯ ಜಮೀನು ಎಷ್ಟು ;

(ಆ) 1-4-1978ಕ್ಕಿಂತ ಹಿಂದಿನ ಅರಣ್ಯ ಭೂಮಿಯ ಅತಿಕ್ರಮಣಗಳನ್ನು ಸಕ್ರಮಗೊಳಿಸಲು ಪ್ರಸ್ತಾವನೆ ಏನಾದರೂ ಸರ್ಕಾರದ ಮುಂದಿದೆಯೆ ;

(ಇ) ಹಾಗಿದ್ದಲ್ಲಿ ಸರ್ಕಾರದವರು ಇದರ ಬಗ್ಗೆ ತೆಗೆದುಕೊಂಡಿರುವ ಕ್ರಮವೇನು ?

ಶ್ರೀ ಬಿ. ಎ. ಜೀವಿಜಯ (ಅರಣ್ಯ ಮಂತ್ರಿಗಳು).—

(ಅ) 3429.92 ಹೆಕ್ಟೇರುಗಳು.

(ಆ) ಹೌದು.

(ಇ) ಅರಣ್ಯ ಸಂರಕ್ಷಣಾ ಅಧಿನಿಯಮದ ಕೆಳಗೆ ಭಾರತ ಸರ್ಕಾರದವರನ್ನು ಅತಿಕ್ರಮಣವನ್ನು ಸಕ್ರಮಗೊಳಿಸುವ ಬಗ್ಗೆ ಸಲಹೆಯನ್ನು ಕೋರಲಾಗಿದೆ.

ಪ್ರಶ್ನೆ : 1698. ಅಧ್ಯಕ್ಷರು :—ಮಾನ್ಯ ಸದಸ್ಯರಿಂದ ಇದಕ್ಕೆ ಉಪಪ್ರಶ್ನೆಗಳು ಇಲ್ಲ.

ವಿಷಯ : ಸವದತ್ತಿ ತಾಲ್ಲೂಕಿನ ಕೆಲವು ಗ್ರಾಮಗಳಿಗೆ ಯಾತ ನೀರಾವರಿ ಸೌಲಭ್ಯ ಒದಗಿಸುವ ಬಗ್ಗೆ

ಪ್ರ. ಸಂಖ್ಯೆ 677 1354) ಶ್ರೀ ಆರ್. ಪಾಟೀಲ (ಪರಸಗಡ) ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ :—

(ಅ) ಸವದತ್ತಿ ತಾಲ್ಲೂಕಿನಲ್ಲಿ ಗೋರಬಾಳ, ಶಿರಸಂಗಿ ಮತ್ತು ಬಸಿದೋಣಿ ಗ್ರಾಮಗಳಿಗೆ ಏತ ನೀರಾವರಿ ಸೌಲಭ್ಯವನ್ನೊದಗಿಸುವ ವಿಷಯ ಸರ್ಕಾರದವರ ಗಮನದಲ್ಲಿದೆಯೇ ;

(ಆ) ಹಾಗಿದ್ದಲ್ಲಿ ಅದನ್ನು ಯಾವಾಗ ಕಾರ್ಯಗತ ಮಾಡಲಾಗುವುದು ;

(ಇ) ಸವದತ್ತಿ ತಾಲ್ಲೂಕಿನ ಬಡ್ಲಿ ಕಾತ್ರಳ ಗ್ರಾಮಗಳು ಮುಳುಗಡೆ ನಕ್ಷೆಯಲ್ಲಿ ಬಂದಿದ್ದು, ಅವು ಗಳಿಗೆ ಯಾತ ನೀರಾವರಿ ಸೌಲಭ್ಯವನ್ನೊದಗಿಸಲು ಸರಕಾರದವರು ಕೈಕೊಂಡಿರುವ ಕ್ರಮವೇನು ?

ಶ್ರೀ ಎಚ್. ಡಿ. ದೇವೇಗೌಡ : (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).

(ಅ) ಇಲ್ಲ.

(ಆ) ಉದ್ಭವಿಸುವುದಿಲ್ಲ.

(ಇ) ಸರ್ಕಾರದವರ ಪರಿಶೀಲನೆಯಲ್ಲಿದೆ.

ಶ್ರೀ ಆರ್. ವಿ. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಸವದತ್ತಿ ತಾಲ್ಲೂಕಿನ ಗೋರಬಾಳ ಮತ್ತು ಶಿರಸಂಗಿ ಮತ್ತು ಬಸಿದೋಣಿ ಗ್ರಾಮಗಳಿಗೆ ಏತ ನೀರಾವರಿ ಯೋಜನೆಗೆ ಸಂಬಂಧಪಟ್ಟ ಹಾಗೆ ನಾನು ಪ್ರಶ್ನೆಯನ್ನು ಕೇಳಿದ್ದೆ. ಅದಕ್ಕೆ ಮಾನ್ಯ ಮಂತ್ರಿಗಳು ಇಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಆದರೆ ಮೈನರ್ ಇರಿಗೇಷನ್ ಸ್ಕೀಮ್ ಏನಿದೆ ಅದನ್ನು ಮತ್ತು ಲಿಫ್ಟ್ ಇರಿಗೇಷನ್ ಸ್ಕೀಮ್‌ನ್ನು 1984-85ನೇ ಸಾಲಿನ ಬಡ್ಜೆಟ್‌ನಲ್ಲಿ ಮಂಜೂರು ಮಾಡಿದ್ದಾರೆ. ಇದು ಹೇಗೆ ?